ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ:</u>** 100/2024

ಪ್ರ.ವ.ಬೋ.ತಾಃ 08-10-2025

ಚಾಸಾಃ 1 ಫ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಗಂಗಪ್ಪ |
| ತಂದೆ/ಗಂಡನ ಹೆಸರು | ರಾಯಣ್ಣ |
| ವಯಸ್ಸು | 62 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಗುಟ್ಟೆ,ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿತರು ನನಗೆ ಗೊತ್ತು. ಚಾಸಾ.2 ರಿಂದ 5 ರವರು ಗೊತ್ತು. ದಿನಾಂಕಃ14.03.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ನಿವೇಶನದ ಬಳಿ ಬಂದು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದರು. 2 ನೇ ಆರೋಪಿ ಕೈಗಳಿಂದ ನನ್ನ ಎದೆಗೆ ಹಲ್ಲೆ ಮಾಡಿದರು. 1 ನೇ ಆರೋಪಿ ಈ ಸೈಟ್ ಗೆ ನೀನು ಇಜಂಕ್ಷನ್ ಆರ್ಡರ್ ತೆಗೆದುಕೊಂಡಿದ್ದೀಯಾ ಎಂದು ಬೈದು, ಈ ಸೈಟ್ ನಲ್ಲಿ ನಿನ್ನನ್ನು ಹೂತು ಹಾಕುತ್ತೇನೆ ಎಂದು ಜೀವ ಬೆದರಿಕೆ ಹಾಕಿದರು. ಈ ಸಂಬಂಧ ನಾನು ಪೊಲೀಸರಿಗೆ ದೂರು ನೀಡಲು ಹೋದ ಸಮಯಹದಲ್ಲಿ ಪೊಲೀಸರು ಸಿವಿಲ್ ವಿವಾದ ಇರುವುದರಿಂದ ದೂರು ತೆಗೆದುಕೊಳ್ಳಲು ಬರುವುದಿಲ್ಲ ಎಂದು ಹೇಳಿದರು. ಆನಂತರ ನಾನು ನಮ್ಮ

ವಕೀಲರ ಮೂಲಕ ನ್ಯಾಯಾಲಯದ ಮುಂದೆ ಖಾಸಗಿ ಪಿರ್ಯಾದನ್ನು ದಾಖಲಿಸಿರುತ್ತೇನೆ. ಆ ಖಾಸಗಿ ಪಿರ್ಯಾದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ದಿಃ 22.04.2024 ರಂದು ಪೊಲೀಸರು ಸ್ಥಳ ಪಂಚನಾಮೆ ಮಾಡಲು ಘಟನಾ ಸ್ಥಳಕ್ಕೆ ಬಂದರು. ಆ ಸಮಯದಲ್ಲಿ ನನ್ನ ಜೊತೆ ಚಾಸಾ.5 ಮತ್ತು 6 ರವರು ಹಾಜರಿದ್ದು, ಬೆಳಗ್ಗೆ 10.30 ರಿಂದ 11.30 ಗಂಟೆಯವರೆಗೆ ಪೊಲೀಸರು ಸ್ಥಳ ಪಂಚನಾಮೆ ಮಾಡಿದರು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರು ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ನನ್ನ ಜೊತೆ ಗಲಾಟೆ ಮಾಡಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎಸ್.ಆರ್.ಆರ್ ವಕೀಲರಿಂದಃ–**

ನಾನು ಆ ಖಾಲಿ ಸೈಟ್ ಗೆ ಸಂಬಂಧಪಟ್ಟಂತೆ ಆರೋಪಿತರ ವಿರುದ್ಧ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು, ಮಂಧುಗಿರಿರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.99/2022 ರಂತೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ಆ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಆ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಈ ಬಗ್ಗೆ ನಮ್ಮ ವಕೀಲರು ಸಹ ನನಗೆ

ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಅದೇ ಸೈಟ್ ಗೆ ಸಂಬಂಧಪಟ್ಟಂತೆ ಈ ನ್ಯಾಯಾಲಯದಲ್ಲಿಯೂ ಸಹ ಅಸಲು ದಾವಾ ಸಂ.99/2024 ರಂತೆ ಮತ್ತೊಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಆ ಸೈಟ್ ನ ಅಕ್ಕ ಪಕ್ಕದಲ್ಲಿ ಶಾಮಂತಕ್ಕ, ನಾಗಲಕ್ಷ್ಮಮ್ಮ, ಗಂಗಾಧರ್, ವೆಂಕಟಮ್ಮ ಮತ್ತು ಪಾರ್ವತಮ್ಮ ಎಂಬುವವರ ಮನೆಗಳಿವೆ. ಆ ಗಲಾಟೆ ಸುಮಾರು ಅರ್ಧ ಗಂಟೆಗಳ ಕಾಲ ನಡೆಯಿತು. ಆ ಸಮಯದಲ್ಲಿ ಸುಮಾರು 10 ರಿಂದ 15 ಜನ ಸೇರಿದ್ದರು. ಅವರ ಹೆಸರುಗಳು ನನಗೆ ನೆನಪಿಲ್ಲ. ಆ ಸಮಯದಲ್ಲಿ ಆ ಸೈಟ್ ನ ಅಕ್ಕ ಪಕ್ಕದವರು ಮತ್ತು ಬೇರೆ ಕಡೆಯವರೂ ಸಹ ಸೇರಿದ್ದರು. ಆ ಸಮಯದಲ್ಲಿ ಮೇಲೆ ಹೇಳಿದ ಶಾಮಂತಕ್ಕ, ನಾಗಲಕ್ಷ್ಮಮ್ಮ, ಗಂಗಾಧರ್, ವೆಂಕಟಮ್ಮ ಮತ್ತು ಪಾರ್ವತಮ್ಮರವರು ಆ ಸ್ಥಳದಲ್ಲಿ ಇರಲಿಲ್ಲ. ಸಾಕ್ಷಿಯು ಶಾಮಂತಕ್ಕರವರು ನಮ್ಮ ಮನೆಯಲ್ಲಿಯೇ ಬಾಡಿಗೆಗೆ ವಾಸವಾಗಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಅವರು ನನ್ನ ಜೊತೆ ವಿಶ್ವಾಸದಿಂದ ಇರುತ್ತಾರೆ ಆದರೆ ಅವರ ಈ ಗಲಾಟೆಯನ್ನು ಬಿಡಿಸಲು ಬಂದಿರುವುದಿಲ್ಲ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಅದೇ ರೀತಿ ನಾಗಲಕ್ಷ್ಮಮ್ಮ, ಗಂಗಾಧರ್, ವೆಂಕಟಮ್ಮ ಮತ್ತು ಪಾರ್ವತಮ್ಮರವರು ಸಹ ಗಲಾಟೆ ಬಿಡಿಸಲು ಬಂದಿರುವುದಿಲ್ಲ.

ಆ ದಿನ ಆರೋಪಿತರು ಆ ಸೈಟ್ ನ ಬಳಿ ಬಂದಿರಲಿಲ್ಲ ಮತ್ತು ಯಾವುದೇ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಎದೆಗೆ ಕೈಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಯಿಂದ ನನ್ನ ಎದೆಗೆ

ಎರಡು ಬಾರಿ ಹೊಡೆದರು ಇದರಿಂದ ಗಾಯಗಳಾಗಿರುವುದಿಲ್ಲ. ಇದರಿಂದ ನನ್ನ ಶರ್ಟ್ ನ ಗುಂಡಿ ಕಿತ್ತುಹೋಗಿರುವುದಿಲ್ಲ ಮತ್ತು ಹರಿದು ಹೋಗಿರುವುದಿಲ್ಲ. ಆ ಸಮಯದಲ್ಲಿ ನಾನು ಒಬ್ಬನೇ ಇದ್ದೆನು. 1 ನೇ ಆರೋಪಿ ನನ್ನನ್ನು ಉದ್ದೇಶಿಸಿ ಸೈಟ್ ನ ಮೇಲೆ ಇಂಜಂಕ್ಷನ್ ಆದೇಶ ತಂದಿದ್ದೀಯಾ ಆಸೈಟ್ ನಲ್ಲಿಯೇ ನಿನ್ನನ್ನು ಹೂತು ಹಾಕುತ್ತೇನೆ ಎಂದು ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆ ಆದ ಮರುದಿವಸ ಪೊಲೀಸ್ ಠಾಣೆಗೆ ಹೋಗಿದ್ದೆನು. ನಾನು ದೂರನ್ನು ಬರೆದುಕೊಂಡು ಠಾಣೆಗೆ ಹೋಗಿರುವುದಿಲ್ಲ. ನಾನು ಪೊಲೀಸರಿಗೆ ಬಾಯಿ ಮಾತಿನ ಮೂಲಕ ವಿಚಾರವನ್ನು ತಿಳಿಸಿರುತ್ತೇನೆ. ಪೊಲೀಸರು ನಾನು ನೀಡಿದ ಮಾಹಿತಿಯನ್ನು ಬರೆದುಕೊಂಡಿರುವುದಿಲ್ಲ. ಆ ಜಾಗಕ್ಕೆ ಸಂಬಂಧಪಟ್ಟ ವಿವಾದ ಸಿವಿಲ್ ನ್ಯಾಯಾಲಯದಲ್ಲಿ ಇರುವುದರಿಂದ ಬಗೆಹರಿಸಿಕೊಳ್ಳುವಂತೆ ಹಿಂಬರಹವನ್ನು ನೀಡಿರುವುದಿಲ್ಲ. ಆರೋಪಿತರು ಗಲಾಟೆ ಮಾಡಿದ ಸಂಬಂಧ ಆ ಸಿವಿಲ್ ದಾವೆಗಳಲ್ಲಿ ನಮ್ಮ ವಕೀಲರ ಮೂಲಕ ಅರ್ಜಿ ಸಲ್ಲಿಸಿರುವುದಿಲ್ಲ.

ನಾನು ದೂರು ಕೊಟ್ಟ ಎಷ್ಟು ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದರು ಎಂಬುದು ನನಗೆ ನೆನಪಿಲ್ಲ. ಸ್ಥಳದಲ್ಲಿ ಪೊಲೀಸರು ಯಾವುದೇ ದಾಖಲೆಗೆ ನನ್ನ ಸಹಿ ಪಡೆದಿರುವುದಿಲ್ಲ. ಆ ಸ್ಥಳದ ಅಕ್ಕ ಪಕ್ಕದಲ್ಲಿ ಚಾಸಾ.5 ಮತ್ತು 6 ರವರಿಗೆ ಸಂಬಂಧಪಟ್ಟ ಯಾವುದೇ ವಾಸದ ಮನೆಗಳು ಇರಲಿಲ್ಲ. ಗಲಾಟೆ ಆದ ಸಮಯದಲ್ಲಿ ಚಾಸಾ.5 ಮತ್ತು 6 ರವರು ಆ ಸ್ಥಳದಲ್ಲಿ ಇರಲಿಲ್ಲ. ಈ ಘಟನೆಯ ಬಗ್ಗೆ ಚಾಸಾ.5 ಮತ್ತು 6 ರವರಿಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ.5 ಮತ್ತು 6 ರವರು ನನ್ನ

ಸಮಕ್ಷಮ ಆ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಸ್ಥಳ ಪಂಚನಾಮೆಯನ್ನು ಪೊಲೀಸರು ಸ್ಥಳದಲ್ಲಿ ಬೆರಳಚ್ಚು ಮಾಡಿದರು. ಆ ದಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ಚಾಸಾ.5 ಮತ್ತು 6 ರವರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತರ ಮನೆಗಳು ಅಕ್ಕ ಪಕ್ಕದಲ್ಲಿವೆ ಎಂದರೆ ಸರಿಯಲ್ಲ. ಸಾಕ್ಷಿಯು ಎದುರುಗಡೆ ಇವೆ ಎಂದು ಸ್ವತಃ ನುಡಿಯುತ್ತಾರೆ. 2022 ರಿಂದಲೂ ಸಹ ನನ್ನ ಮತ್ತು ಆರೋಪಿತರ ನಡುವೆ ನಿವೇಶನದ ವಿಚಾರವಾಗಿ ವೈಮನಸ್ಸಿದ್ದು ಮಾತುಕತೆ ಇಲ್ಲ ಎಂದರೆ ಸರಿ. ಆ ದಿನ ಯಾವುದೇ ಗಲಾಟೆ ಆಗದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು ನನ್ನ ವಕೀಲರ ಮೂಲಕ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ